# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ: ಬಿಬಿಎಂಪಿ/ಜಂಟಿ ಆಯುಕ್ತರು(ಆರೋಗ್ಯ)/PR-F-852/15-16

ಆಯುಕ್ತರ ಕಛೇರಿ,
ನಗರಪಾಲಿಕೆ ಕಛೇರಿಗಳು, ನ.ರಾ.ಚೌಕ,
ಬೆಂಗಳೂರು, ದಿನಾಂಕ: 27-07-2015

## ಸುತ್ತೋಲೆ

**ವಿಷಯ:-** ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಖಾಲಿ ನಿವೇಶನಗಳಲ್ಲಿ ಕಸದ ರಾಶಿ, ಡೆಬ್ರಿಸ್‌ಗಳನ್ನು ತೆರವುಗೊಳಿಸಲು ಕೆ.ಎಂ.ಸಿ. ಕಾಯ್ದೆಯನ್ವಯ ಕ್ರಮಕೈಗೊಳ್ಳುವ ಬಗ್ಗೆ.

* * * * *

1. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿರುವ ಹಲವಾರು ಖಾಲಿ ನಿವೇಶನಗಳಲ್ಲಿ ಕಸದ ರಾಶಿ, ಡೆಬ್ರಿಸ್‌ಗಳನ್ನು ಹಾಕಿರುವುದು ಕಂಡುಬಂದಿರುತ್ತದೆ. ಖಾಲಿ ನಿವೇಶನಗಳಲ್ಲಿಯ ಕಸದ ರಾಶಿ ಮತ್ತು ಭಗ್ನಾವಶೇಷ (Debris)ಗಳನ್ನು ತೆರವುಗೊಳಿಸುವ ಕುರಿತು ಸಂಬಂಧಪಟ್ಟ ಅಭಿಯಂತರರು ಹಾಗೂ ಆರೋಗ್ಯ ಪರಿವೀಕ್ಷಕರು ಹಾಗೂ ಅವರ ಮೇಲಾಧಿಕಾರಿಗಳು ಈ ಕೆಳಕಂಡಂತೆ ಕ್ರಮ ಜರುಗಿಸಲು ಸೂಚಿಸಿದೆ.

2. ಕೆಳಕಂಡಂತೆ ಕರ್ನಾಟಕ ಪೌರ ನಿಗಮಗಳ ಅಧಿನಿಯಮ 1976ರ ಕಲಂ 256, 257, 332, 333 ಹಾಗೂ 335 ರಡಿ ಆಯುಕ್ತರಿಗೆ ಅಧಿಕಾರ ನೀಡಲಾಗಿರುತ್ತದೆ.

- **ಕಲಂ 256: ಅಧಿಭೋಗದಾರರಿಂದ ಕಸ ಮತ್ತು ಹೊಲಸಿನ ಶೇಖರಣೆಯ ಬಗ್ಗೆ ಆದೇಶಿಸಿರುವ ಸಾರ್ವಜನಿಕ ನೋಟೀಸು**
- **ಕಲಂ 257: ಆವರಣದ ಮೇಲೆ ಹೆಚ್ಚಿನ ಪ್ರಮಾಣದಲ್ಲಿ ರಾಶಿಗೂಡುವ ಕಸ ಅಥವಾ ಹೊಲಸನ್ನು ತೆಗೆದುಹಾಕುವುದು.**
- **ಕಲಂ 332: ಒಕ್ಕಲಿಲ್ಲದ ಕಟ್ಟಡಗಳು ಅಥವಾ ಭೂಮಿಗಳು;**
- **ಕಲಂ 333: ಹೊಲಸು ಅಥವಾ ಹಾನಿಕರ ಸಸ್ಯಗಳನ್ನು ತೆಗೆದುಹಾಕುವುದು;**
- **ಕಲಂ 335: ಕಟ್ಟಡಗಳು ಅಥವಾ ಭೂಮಿಗಳಿಗೆ ಬೇಲಿ ಹಾಕುವುದು ಮತ್ತು ಹಸಿರು ಬೇಲಿಗಳು ಮತ್ತು ಮರಗಳ ಸವರುವಿಕೆ:** ಕಮೀಷನರರನು, ಸಾರ್ವಜನಿಕರ ಬೀದಿಗೆ ಸಮೀಪವಿರುವ ಯಾವುದೇ ಕಟ್ಟಡ ಅಥವಾ ಖಾಲಿ ಭೂಮಿಯ ಒಡೆಯ ಅಥವಾ ಅಧಿಭೋಗದಾರರನ್ನು:-

ಎ) ಕಮೀಷನರನಿಗೆ ಸಮಾಧಾನವಾಗುವಂತೆ ಅದಕ್ಕೆ ಬೇಲಿ ಹಾಕಲು; ಅಥವಾ

ಬಿ) ಕಮೀಷನರರನು ನಿರ್ಧರಿಸಬಹುದಾದಂತೆ ಪಕ್ಕದಲ್ಲಿರುವ ರಸ್ತೆಯ ಮಟ್ಟದಿಂದ ಅಂಥ ಎತ್ತರವನ್ನು ಅವುಗಳ ಮೀರದ ಹಾಗೆ ಸದರಿ ಬೀದಿಯ ಅಂಚಿನಲ್ಲಿರುವ ಯಾವುದೇ ಹಸಿರು ಬೇಲಿಗಳನ್ನು ಕತ್ತರಿಸಿ ಸಮ ಮಾಡಲು ಅಥವಾ ಸವರಲು ಅಥವಾ

ಸಿ) ಸದರಿ ಬೀದಿಯ ಮೇಲೆ ಚಾಚಿಕೊಂಡಿರುವ ಮತ್ತು ಅದನ್ನು ಅಥವಾ ಸಂಚಾರದ ದೃಷ್ಟಿಯನ್ನು ಅಡ್ಡಿಪಡಿಸುವ ಅಥವಾ ಅದಕ್ಕೆ ಹಾನಿಪಡಿಸುವ ಯಾವುದೇ ಹಸಿರು ಬೇಲಿಗಳನ್ನು ಮತ್ತು ಮರಗಳನ್ನು ಕತ್ತರಿಸಲು ಮತ್ತು ಕತ್ತರಿಸಿ ಸಮ ಮಾಡಲು; ಅಥವಾ

ಡಿ) ಅದರ ಎತ್ತರ ಮತ್ತು ಇರುವಿಕೆಯ ಕಾರಣದಿಂದಾಗಿ ಅಪಾಯವನ್ನು ಉಂಟುಮಾಡುವ ಹಾಗೆ ಸಂಚಾರದ ದೃಷ್ಟಿಯನ್ನು ಅಡ್ಡಿಪಡಿಸುವ ಸುತ್ತುವರಿದಿರುವ ಗೋಡೆ ಅಥವಾ ಬೇಲಿಯನ್ನು ತಗ್ಗಿಸುವುದು.

3. ಮೇಲಿನ ಕಲಂ 256, 257, 332, 333 ಹಾಗೂ 335ರನ್ವಯ ಗಿಡಗಂಟೆ, ಕಸ ಹಾಗೂ ಡೆಬ್ರಿಸ್ ತುಂಬಿರುವ ಖಾಲಿ ನಿವೇಶನದ ಮಾಲೀಕರಿಗೆ ಕಲಂ 257ರಡಿ ಈ ಕೆಳಕಂಡಂತೆ ನಿರ್ದೇಶಿಸಿ ನೋಟೀಸನ್ನು ವಲಯ ಜಂಟಿ ಆಯುಕ್ತರು ನೀಡತಕ್ಕದ್ದು. ನೋಟೀಸಿನ ಮಾದರಿ ನಮೂನೆಯನ್ನು ಈ ಸುತ್ತೋಲೆಯೊಂದಿಗೆ ಲಗತ್ತಿಸಿದೆ.

ಎ) ಸದರಿ ನಿವೇಶನದಲ್ಲಿ ಇರುವಂತಹ ಗಿಡಗಂಟೆ, ಕಸದ ರಾಶಿ ಹಾಗೂ ಡೆಬ್ರಿಸ್‌ಗಳನ್ನು 3 ದಿನಗಳೊಳಗಾಗಿ ತೆರವುಗೊಳಿಸಲು,

ಬಿ) ಅಗತ್ಯವಿದ್ದಲ್ಲಿ ಸದರಿ ನಿವೇಶನದ ಸುತ್ತಲೂ ಕಾಂಪೌಂಡ್ ಗೋಡೆ ನಿರ್ಮಿಸಲು

4. ಸದರಿ ನೋಟೀಸನ್ನು ನೊಂದಾಯಿತ ಸ್ವೀಕೃತಿ ಅಂಚೆ (RPAD) ಮೂಲಕ ರವಾನಿಸುವುದು. ಜೊತೆಗೆ ಒಂದು ಪ್ರತಿಯನ್ನು ಸ್ವತ್ತಿನ ಮೇಲೆ ಅಂಟಿಸಿ ಮಹಜರ್ ಮಾಡಿ ಫೋಟೋ ತೆಗೆಯುವುದು.

5. ಪಾಲಿಕೆ ವತಿಯಿಂದ ಗಿಡಗಂಟೆ, ಕಸದ ರಾಶಿ ಹಾಗೂ ಡೆಬ್ರಿಸ್‌ನ್ನು ಕಸ ವಿಲೇವಾರಿ ಗುತ್ತಿಗೆದಾರರಿಂದ ಹಾಗೂ ಸಿಲ್ಟ್ ಟ್ರಾಕ್ಟರ್‌ನಿಂದ ತೆರವುಗೊಳಿಸಲು ಸಂಬಂಧಪಟ್ಟ ಸಹಾಯಕ ಅಭಿಯಂತರರು ಮತ್ತು ಸಹಾಯಕ ಕಾರ್ಯಪಾಲಕ ಅಭಿಯಂತರರು ಕ್ರಮವಹಿಸುವುದು.

6. ಈ ತೆರವು ಕಾರ್ಯಕ್ಕೆ ಕಲಂ 257(ಬಿ)ರಡಿ ಕಛೇರಿ ಆದೇಶ ಸಂಖ್ಯೆ 4686 ದಿನಾಂಕ 21-7-15ರಲ್ಲಿ ನಿಗದಿಪಡಿಸಿದ ಶುಲ್ಕವನ್ನು ನಿವೇಶನದ ಪ್ರತಿ ಚದರ ಅಡಿಗೆ ರೂ.2.00 ರಂತೆ ಪ್ರತಿ ಬಾರಿ ಸ್ವಚ್ಛಗೊಳಿಸಿದ ಮೊತ್ತವನ್ನು ನಿವೇಶನದ/ಸ್ವತ್ತಿನ ಮಾಲೀಕರಿಂದ ವಸೂಲಿ ಮಾಡುವುದು. ಈ ರೀತಿಯಾಗಿ ತಗುಲಿದ ವೆಚ್ಚದ ಮೊತ್ತದ ವಿವರಗಳನ್ನು ಆನ್‌ಲೈನ್‌ನಲ್ಲಿ ಸ್ವತ್ತಿನ ಪಿ.ಐ.ಡಿ ಸಂಖ್ಯೆಯಡಿ ಕಂದಾಯ ರಶೀದಿಯಲ್ಲಿನ ಇತರೆ ಅಂಕಣದಲ್ಲಿ ದಾಖಲಿಸುವುದು ಹಾಗೂ ಈ ಶುಲ್ಕವನ್ನು ಕಲಂ 470 ರಂತೆ ಕಂದಾಯದ ಬಾಕಿಯಾಗಿ ವಸೂಲಿ ಮಾಡಲು ಸಂಬಂದಪಟ್ಟ ಕಂದಾಯ ಅಧಿಕಾರಿಗಳು ಕ್ರಮವಹಿಸುವುದು.

**(ಎ)** ಒಂದೆರಡು ಬಾರಿ ತೆರವುಗೊಳಿಸಿದಾಗಲೂ ತಾವಾಗಿ ತೆರವುಗೊಳಿಸದಿದ್ದ ಪಕ್ಷದಲ್ಲಿ ಅಂತಹ ಮಾಲೀಕರಿಗೆ ನೋಟೀಸು ಜಾರಿಯಾದ ನಿಗಧಿತ ಸಮಯದಲ್ಲಿ ತೆರವುಗೊಳಿಸಲು ವಿಫಲರಾದಲ್ಲಿ ಸಕ್ಷಮ ಪೋಲೀಸ್ ಠಾಣಾಧಿಕಾರಿಗೆ ಕಲಂ 462(2)ರಡಿ ಲಿಖಿತ ದೂರು ಸಲ್ಲಿಸುವುದು ಹಾಗೂ ಪಾಲಿಕೆಯು ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆಯ 1976ರ ಕಲಂ 431ರ ಅಡಿಯಲ್ಲಿ ನಿಗಧಿಪಡಿಸಿದ ದಂಡವನ್ನು ವಿಧಿಸಲು ಕ್ರಮವಹಿಸುವುದು.

**(ಬಿ)** ಮೇಲ್ಕಂಡ ಪಾಲಿಕೆಯ ಸೂಚನೆ ಮತ್ತು ಆದೇಶವನ್ನು ಉಲ್ಲಂಘಿಸಿದ ಸಂದರ್ಭದಲ್ಲಿ ಸಂಬಂಧಪಟ್ಟ ಅಧಿಕಾರಿಯು ಮಾನ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ ದಂಡ ಪ್ರಕ್ರಿಯಾ ಸಂಹಿತೆ ಕಲಂ 200ರ ಅಡಿಯಲ್ಲಿ ಖಾಸಗಿ ದೂರು ಸಲ್ಲಿಸತಕ್ಕದ್ದು.

7. ಈ ಮೇಲಿನ ಸೂಚನೆಗಳನ್ನು ಪಾಲಿಸಲು ಸಂಬಂಧಪಟ್ಟ ಅಭಿಯಂತರರು ಮತ್ತು ಆರೋಗ್ಯ ಪರಿವೀಕ್ಷಕರನ್ನು ಜವಾಬ್ದಾರರನ್ನಾಗಿಸಿ ಅವರುಗಳು ಈ ಬಗ್ಗೆ ದೂರುಗಳಿಗೆ ಅವಕಾಶ ನೀಡದಂತೆ ಕ್ರಮ ಜರುಗಿಸುವುದು.

ಆಯುಕ್ತರು,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಪ್ರತಿಯನ್ನು: ಮಾನ್ಯ ಆಡಳಿತಗಾರರ ಅವಗಾಹನೆಗೆ ಸಲ್ಲಿಸಿದೆ.
: ವಿಶೇಷ ಆಯುಕ್ತರು (ಯೋಜನೆ)/(ಘ.ತ್ಯಾ.ನಿ.)/ಅಪರ ಆಯುಕ್ತರು (ಆಡಳಿತ)ರವರಿಗೆ ಕಳುಹಿಸಿದೆ.
: ಅಪರ/ಜಂಟಿ ಆಯುಕ್ತರು (ಪಶ್ಚಿಮ/ದಕ್ಷಿಣ/ಪೂರ್ವ/ಯಲಹಂಕ/ದಾಸರಹಳ್ಳಿ/ಮಹದೇವಪುರ/ರಾಜರಾಜೇಶ್ವರಿನಗರ/ಬೊಮ್ಮನಹಳ್ಳಿ ವಲಯ) ರವರ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
: ಪ್ರಧಾನ ಅಭಿಯಂತರರು ಹಾಗೂ ಎಲ್ಲಾ ವಲಯದ ಮುಖ್ಯ ಅಭಿಯಂತರರಿಗೆ ಕಳುಹಿಸುತ್ತಾ ಕಾರ್ಯಪಾಲಕ ಅಭಿಯಂತರರು/ಸಹಾಯಕ ಕಾರ್ಯಪಾಲಕ ಅಭಿಯಂತರರು/ಸಹಾಯಕ/ಕಿರಿಯ ಅಭಿಯಂತರರಿಗೆ ಕಟ್ಟುನಿಟ್ಟಾಗಿ ಪಾಲಿಸುವಂತೆ ಕ್ರಮವಹಿಸುವುದು.
: ಉಪ ಆಯುಕ್ತರು (ಕಂದಾಯ)/ಕಂದಾಯ ಅಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.
: ಪಾಲಿಕೆಯ ಎಲ್ಲಾ ವಕೀಲರಿಗೆ ಕಳುಹಿಸುತ್ತಾ ಪ್ರಕರಣಗಳಲ್ಲಿ ಕೂಡಲೇ ಸುತ್ತೋಲೆಯ ವಿಷಯದಲ್ಲಿ ಕ್ರಮಕೈಗೊಳ್ಳಲು ತಿಳಿಸಲಾಗಿದೆ.
: ಕಾನೂನು ಕೋಶದ ಮುಖ್ಯಸ್ಥರ ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
: ಕಛೇರಿ ಪ್ರತಿ.

## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ:

ಅಪರ/ಜಂಟಿ ಆಯುಕ್ತರು ರವರ ಕಛೇರಿ,
__________ ವಲಯ,
ಬೆಂಗಳೂರು, ದಿನಾಂಕ: ______.

ಗೆ,

ಸ್ವತ್ತಿನ ಮಾಲೀಕರು,

__________________

__________________

### ಕೆಎಂಸಿ ಕಾಯ್ದೆ ಕಲಂ 257 ರಡಿ ಹೊರಡಿಸಿದ ಆದೇಶ

ಉಲ್ಲೇಖ: ಈ ಕಛೇರಿಯಿಂದ ಕೆ.ಎಂ.ಸಿ. ಕಾಯ್ದೆ ಕಲಂ 257ರಡಿ ದಿನಾಂಕ ___ ರ ನೋಟೀಸು

* * * * *

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ:____ ಸ್ವತ್ತಿನ/ಪಿ.ಐ.ಡಿ. ಸಂಖ್ಯೆ: ____ ಬೆಂಗಳೂರು. ಖಾಲಿ/ಸ್ವತ್ತಿನಲ್ಲಿ ಕಟ್ಟಡ ಭಗ್ನಾವಶೇಷಗಳನ್ನು/ಗಿಡಗಂಟೆ/ಕಸ ಮತ್ತು ಹೊಲಸಿನ ಶೇಖರಣೆಯನ್ನು ಮಾಡಿದ್ದು/ಸುಗಮ ಸಂಚಾರಕ್ಕೆ ಅಡ್ಡಿಯುಂಟು ಮಾಡುವಂತೆ ಬೇಲಿ ಬೆಳೆಸಿರುವುದು/ಶೇಖರಣೆಗೊಂಡಿರುವುದು ಸ್ಥಳ ಪರಿವೀಕ್ಷಣೆಯಿಂದ ದೃಢಪಟ್ಟಿರುತ್ತದೆ.

ಈಗಾಗಲೇ ಈ ಕಛೇರಿಯ ನೋಟೀಸು ದಿನಾಂಕ:____ರಂತೆ ಮೇಲ್ಕಂಡ ಸ್ವರೂಪದ ಅಡೆತಡೆಯನ್ನು 3 ದಿನಗಳೊಳಗಾಗಿ ತೆರವುಗೊಳಿಸಲು ಸೂಚಿಸಲಾಗಿಯೂ ತಾವು ಯಾವುದೇ ರೀತಿಯ ಕ್ರಮಕೈಗೊಂಡಿರುವುದಿಲ್ಲ.

ಮೇಲ್ಕಂಡ ಉಲ್ಲಂಘನೆಯಿಂದ ನಗರ ಸೌಂದರ್ಯ ಹಾಳಾಗುವುದರೊಂದಿಗೆ ಸಾಂಕ್ರಾಮಿಕ ರೋಗಗಳು ಹರಡಲು ಕಾರಣವಾಗಿರುತ್ತದೆ., ಈ ರೀತಿಯ ಉಲ್ಲಂಘನೆಯು ಕೆಎಂಸಿ ಕಾಯ್ದೆ ಕಲಂ 257ರ ಸ್ಪಷ್ಟ ಉಲ್ಲಂಘನೆಯಾಗಿರುತ್ತದೆ. ಆದ್ದರಿಂದ ಮೇಲಿನ ಕಾನೂನು ಬಾಹೀರ ಅಡೆತಡೆಗಳನ್ನು ತೆರವುಗೊಳಿಸಲು ವಿಫಲವಾಗಿರುವುದಾಗಿ ದೃಢಪಟ್ಟಿರುತ್ತದೆ.

### ಆದೇಶ

ಮೇಲಿನ ಅಡೆತಡೆಯನ್ನು ತೆರವುಗೊಳಿಸಲು ವಿಫಲರಾಗಿರುವ ನಿಮ್ಮ ವಿರುದ್ಧ ಕೆಎಂಸಿ ಕಾಯ್ದೆ ಅಡಿ ಆಯುಕ್ತರಿಂದ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಸದರಿ ಅಡೆತಡೆಯನ್ನು ಪಾಲಿಕೆಯು ತೆರವುಗೊಳಿಸಲು ಪಾಲಿಕೆಗೆ ತಗುಲಿದ ಖರ್ಚನ್ನು ಕಲಂ 257(2)ರಡಿ ನಿಗದಿಪಡಿಸಿದ ಶುಲ್ಕವಾದ ನಿವೇಶನದ ವಿಸ್ತೀರ್ಣಕ್ಕೆ ಪ್ರತಿ ಚದರ ಅಡಿಗೆ ರೂ.2 ರಂತೆ ಒಟ್ಟು ರೂ. ____/- ಗಳ ಶುಲ್ಕವನ್ನು ವಸೂಲಿ ಮಾಡಲು _____ ವಿಭಾಗದ ಕಂದಾಯ ಅಧಿಕಾರಿಗೆ ನಿರ್ದೇಶಿಸಿದೆ.

ಜಂಟಿ ಆಯುಕ್ತರು (        ) ವಲಯ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
ಬೆಂಗಳೂರು.

ಪ್ರತಿಯನ್ನು: ಸಂಬಂಧಪಟ್ಟ ಕಂದಾಯ ಅಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
: ಸಂಬಂಧಪಟ್ಟ ಅಭಿಯಂತರರಿಗೆ ಸ್ವತ್ತಿನ ಮಾಲೀಕರ ವಿರುದ್ಧ ದೂರು ದಾಖಲಿಸಲು ಕಳುಹಿಸಿದೆ.

## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ:

ಅಪರ/ಜಂಟಿ ಆಯುಕ್ತರು ರವರ ಕಛೇರಿ,
__________ ವಲಯ,
ಬೆಂಗಳೂರು, ದಿನಾಂಕ: ______.

### ಕೆಎಂಸಿ ಕಾಯ್ದೆ ಕಲಂ 257ರಡಿ ಹೊರಡಿಸಿದ ನೋಟೀಸು

ಗೆ,
ಸ್ವತ್ತಿನ ಮಾಲೀಕರು,
________________
________________

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ: _____ ಸ್ವತ್ತಿನ/ಪಿ.ಐ.ಡಿ ಸಂಖ್ಯೆ: ______ ಬೆಂಗಳೂರು, ಖಾಲಿ ಸ್ವತ್ತಿನಲ್ಲಿ ಕಟ್ಟಡ ಭಗ್ನಾವಶೇಷಗಳನ್ನು/ಗಿಡಗಂಟೆ/ಕಸ ಇನ್ನಿತರೇ ಅನುಪಯುಕ್ತ ವಸ್ತುಗಳು ಮತ್ತು ಗಲೀಜು ಶೇಖರಣೆಯಾಗಿದ್ದು/ಸುಗಮ ಸಂಚಾರಕ್ಕೆ ಅಡ್ಡಿಯುಂಟು ಮಾಡುವಂತೆ ಬೇಲಿ ಬೆಳೆದಿರುವುದು ದಿನಾಂಕ: ___ರ ಸ್ಥಳ ಪರಿವೀಕ್ಷಣೆಯಿಂದ ದೃಢಪಟ್ಟಿದೆ.

ಮೇಲ್ಕಂಡ ಉಲ್ಲಂಘನೆಯಿಂದ ನಗರದಲ್ಲಿ ಸಾಂಕ್ರಾಮಿಕ ರೋಗಗಳು ಹರಡಲು ಕಾರಣವಾಗಿರುತ್ತದೆ. ಈ ರೀತಿಯ ನಡುವಳಿಕೆ ಕೆಎಂಸಿ ಕಾಯ್ದೆಯ ಕಲಂ 257ರಡಿ ಸ್ಪಷ್ಟ ಉಲ್ಲಂಘನೆಯಾಗಿರುತ್ತದೆ. ತಮ್ಮ ವಿರುದ್ಧ ಕೆಎಂಸಿ ಕಾಯ್ದೆ ಕಲಂ 431 ರಡಿಯಲ್ಲಿ ದಂಡವನ್ನು ವಿಧಿಸಲು ಹಾಗೂ ಕ್ರಿಮಿನಲ್ ಸ್ವರೂಪದ ದೂರನ್ನು ನೀಡಬಹುದಾಗಿದೆ.

<u>ಮೇಲಿನ ಅಡೆತಡೆಯನ್ನು ಈ ನೋಟೀಸು ತಲುಪಿದ 3 ದಿನಗಳೊಳಗಾಗಿ ತೆರವುಗೊಳಿಸುವುದು. ತಪ್ಪಿದಲ್ಲಿ ಸೂಕ್ತ ದೂರನ್ನು ದಾಖಲಿಸುವುದಲ್ಲದೆ ನಿವೇಶನವನ್ನು ಪಾಲಿಕೆ ವತಿಯಿಂದ ಸ್ವಚ್ಛಗೊಳಿಸಲಾಗುವುದು. ಇದರ ಬಾಬ್ತು ಕಲಂ 257(2)ರಡಿ ನಿಗದಿಪಡಿಸಿದ ಶುಲ್ಕವಾದ ನಿವೇಶನದ ವಿಸ್ತೀರ್ಣಕ್ಕೆ ಪ್ರತಿ ಚದರ ಅಡಿಗೆ ರೂ.2.00 ರಂತೆ ತೆರವು ಖರ್ಚಿನ ಹಣವನ್ನು ಒಂದು ವಾರದೊಳಗಾಗಿ ಆಯುಕ್ತರು, ಬಿಬಿಎಂಪಿ ರವರ ಖಾತೆಗೆ ಸಂದಾಯ ಮಾಡಿದ ರಶೀದಿ ನೀಡತಕ್ಕದ್ದು.</u>

<u>ತಪ್ಪಿದಲ್ಲಿ ಸದರಿ ಮೊತ್ತವನ್ನು ಕಲಂ 470ರಡಿ ನಿಮ್ಮಿಂದ ವಸೂಲಾಗುವ ಆಸ್ತಿ ತೆರಿಗೆ ಹಣದಲ್ಲಿ ಹೆಚ್ಚುವರಿಯಾಗಿ ಸೇರಿಸಿ ನಿಮ್ಮಿಂದ ವಸೂಲಿ ಮಾಡಲು ಸೂಕ್ತ ಕಾನೂನು ಕ್ರಮ ಜರುಗಿಸಲಾಗುವುದು.</u>

ಜಂಟಿ ಆಯುಕ್ತರು (          ) ವಲಯ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
ಬೆಂಗಳೂರು.